ಜೊತೆಗೆ ಜೀರೋ ಅವರ್‌ನಲ್ಲಿ ಬಹಳ ಪ್ರಮುಖವಾದ ವಿಷಯಗಳನ್ನು ಬಜೆಟ್ ಇದೆ ಎಂದು ಕಾರಣಕ್ಕಾಗಿ ಅವತ್ತಿನಿಂದ ನಾವು ಪ್ರಸ್ತಾಪ ಮಾಡಲು ಆಗಲಿಲ್ಲ ಆ ಚರ್ಚೆ ಆಗಿ ಸರ್ಕಾರ ಉತ್ತರ ಕೊಟ್ಟರೆ ಪರಿಹಾರ ಸಿಗುತ್ತದೆ ಸಾರ್. ಅದಕ್ಕೋಸ್ಕರ ಅವಕಾಶ ಮಾಡಿ ಕೊಡಿ. ಬೇರೆ ಏನು ಇದೆ ಬಿಸಿನೆಸ್?

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೆ, ಈಗ ಬಹಳ ಜನ ನೋಟೀಸ್ ಕೊಟ್ಟಿದ್ದಾರೆ. ಎಲ್ಲರಿಗೂ ಅವಕಾಶ ಕೊಡಬೇಕಾಗುತ್ತದೆ. ಒಂದೊಂದು ಸಾರಿ ಒಂದು ವಿಷಯದ ಬಗ್ಗೆಯೇ ಅರ್ಧ ಗಂಟೆ, ಮುಕ್ಕಾಲು ಗಂಟೆ ಚರ್ಚೆ ಆದರೆ ಎಲ್ಲರಿಗೂ ಅವಕಾಶ ಸಿಗುವುದಿಲ್ಲ. ಅದು ನನ್ನ ಉದ್ದೇಶ, ಅದನ್ನು ದಯಮಾಡಿ ಅರ್ಥ ಮಾಡಿಕೊಳ್ಳಿ.

12.30 ಪಿಎಂ

(iii) ಬೆಂಗಳೂರು ನಗರ ಸಭೆಗಳ ಆದಾಯದ ಸ್ಟಾಂಪ್ ಡ್ಯೂಟಿ ಅಭಿವೃದ್ಧಿ ಶುಲ್ಕ ನಕ್ಷೆ ಮಂಜೂರಾತಿ ಹಾಗೂ ಖಾತಾ ಶುಲ್ಕ ವಸೂಲಾತಿಯನ್ನು ತಡೆಹಿಡಿದಿರುವ ಬಗ್ಗೆ

† **ಶ್ರೀ ಆರ್. ಅಶೋಕ್ (ಉತ್ತರಹಳ್ಳಿ)** : ಮಾನ್ಯ ಅಧ್ಯಕ್ಷರೆ, ಬೆಂಗಳೂರಿನ ಸುತ್ತಮುತ್ತಲೂ ಇರುವ ನಗರಸಭೆಗಳು ಇವೊತ್ತು ಒಂದು ರೀತಿಯಲ್ಲಿ ಅನಾಥವಾಗಿವೆ. ಲೋಕಾಯುಕ್ತದವರ ಧಾಳಿಯಾದ ಬಳಿಕ ಅಲ್ಲಿ ಯಾವುದೇ ಕಾಮಗಾರಿ ನಡೆಯುತ್ತಿಲ್ಲ. ಲೋಕಾಯುಕ್ತವು ಧಾಳಿ ನಡೆಸಿದ ಬಳಿಕ ಅಲ್ಲಿ ಯಾವ ಅಧಿಕಾರಿಗಳು ಅಕ್ರಮವೆಸಗಿದ್ದರೋ, ಅವರು ಸಸ್ಪೆಂಡ್ ಆಗಿ ನಂತರ retain ಆಗಿ ಈಗ ಬೇರೆ ಬೇರೆ ಹುದ್ದೆಗಳಲ್ಲಿದ್ದಾರೆ ! ಅದರ ಬಗ್ಗೆ ನಾನು ಹೆಚ್ಚು ಮಾತನಾಡುವುದಿಲ್ಲ, ಆದರೆ, ಅಲ್ಲಿನ ಜನರು, ಯಾವುದೇ ತಪ್ಪು ಮಾಡದಿರುವ, ತೆರಿಗೆ ಕಟ್ಟಿರುವ ಅಮಾಯಕರಿಗೆ ಇವೊತ್ತು ಅನ್ಯಾಯವಾಗುತ್ತಿದೆ. ಕಳೆದ ಎಂಟು ತಿಂಗಳುಗಳಿಂದ ಅಲ್ಲಿ ಯಾವುದೇ ಕಾಮಗಾರಿ ಕೈಗೊಳ್ಳಲು ಅವಕಾಶವಿಲ್ಲ ಸ್ವಚ್ಛಗೊಳಿಸುವುದಕ್ಕೆ ಆರೋಗ್ಯ ನೈರ್ಮಲ್ಯತೆ ಕಾಪಾಡಲು, ಕಸ ಗುಡಿಸುವವರಿಗೂ ಕೆಂಗೇರಿ ಪುರಸಭೆಯೊಂದರಲ್ಲೇ ಯಾವುದೇ ರೀತಿ.....

ಶ್ರೀ ಎಂ.ಪಿ. ಪ್ರಕಾಶ್ : ನಾನು ತಮ್ಮ ಸಹಾಯಕ್ಕೆ ಬರುತ್ತೇನೆ. ಶೂನ್ಯ ವೇಳೆಯಲ್ಲಿ ಆದಾಯದ ಸ್ಟಾಂಪ್ ಡ್ಯೂಟಿ. ಅಭಿವೃದ್ಧಿ ಶುಲ್ಕ, ನಕಾಶೆ ಮಂಜೂರಾತಿ ಶುಲ್ಕ ಹಾಗೂ ಖಾತೆ ಶುಲ್ಕ ವಸೂಲಾತಿಯನ್ನು ತಡೆಹಿಡಿದಿರುವ ಬಗ್ಗೆ ತಾವು ಸರ್ಕಾರದ ಗಮನ ಸೆಳೆಯಬೇಕಿದೆ. ಆದರೆ, ನೀವು ಬೇರೆ ವಿಷಯ ಪ್ರಸ್ತಾಪಿಸುತ್ತಿದ್ದೀರಿ.

ಶ್ರೀ ಆರ್.ಅಶೋಕ್ : ಅದಕ್ಕೆ ಸಂಬಂಧಿಸಿದಂತೆಯೇ ಪ್ರಸ್ತಾಪಿಸುತ್ತಿದ್ದೇನೆ,

ಶ್ರೀ ಎಂ.ಪಿ. ಪ್ರಕಾಶ್ : ಅದಕ್ಕೆ ಸಂಬಂಧಪಡುವುದಿಲ್ಲ.

ಶ್ರೀ ಆರ್, ಅಶೋಕ್ : ಇದೆಲ್ಲಾ ತಡೆಹಿಡಿದಿರುವುದಕ್ಕೇ ಅವೆಲ್ಲಾ ನಿಂತಿರುವುದು.

ಅಧ್ಯಕ್ಷರು : ಸರ್ಕಾರಕ್ಕೆ ನೋಟಿಸ್ ಹೋಗಿದೆ. ಅದಕ್ಕೆ ಉತ್ತರವಿದೆ. ಆದರೆ, ಬೇರೆ ವಿಷಯ ಪ್ರಸ್ತಾಪಿಸಿದರೆ ಸರಿಯಾದ ಉತ್ತರ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

SRI M.P. PRAKASH : They have to mention it only. ಶೂನ್ಯ ವೇಳೆಯಲ್ಲಿ ಆ ವಿಚಾರ ಪ್ರಸ್ತಾಪಿಸುವುದನ್ನು ಕೈಬಿಡಬೇಕು. ಅದರ ಬಗ್ಗೆ ಚರ್ಚಿಸುವುದಕ್ಕೆ ಅವಕಾಶವಿಲ್ಲ ತಾವು(ಅಧ್ಯಕ್ಷರು) ಅವಕಾಶ ಕೊಟ್ಟರೆ ಕೊಡಿ. ಅದಕ್ಕೆ ಬೇರೆ ಅಭಿಪ್ರಾಯವಿಲ್ಲ. They have to simply mention it and leave it at that.

ಅಧ್ಯಕ್ಷರು : ಈ ಕುರಿತಂತೆ ಬಹಳಷ್ಟು ಮಾನ್ಯ ಸದಸ್ಯರು ಸೂಚನೆ ಕೊಟ್ಟಿರುವುದರಿಂದ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ, ಚರ್ಚೆಗೆ ಅವಕಾಶವಿಲ್ಲ.

ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ನಾನು ಕೇಳುತ್ತಿರುವುದೇನೆಂದರೆ, ಹಿಂದೆ ಜನತಾದಳದ ಸರ್ಕಾರದಲ್ಲಿ ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ stamp duty ಮತ್ತು plan sanction ಏನಿದೆ, ಬೆಂಗಳೂರು ನಗರಸಭೆಗೆ ನೂರಕ್ಕೆ ಶೇಕಡ 80ರಷ್ಟು ರೆವಿನ್ಯೂ ನಿವೇಶನದ ಬಡಾವಣೆಗಳಿದ್ದು, ಶೇಕಡ ಹತ್ತರಷ್ಟು ಬಿಡಿಎ ಬಡಾವಣೆಗಳಿವೆ. ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಬೇಕಿದ್ದರೆ ಮತ್ತು ರೆವಿನ್ಯೂ ಬಡಾವಣೆಯಲ್ಲಿರುವ ನಿವೇಶನದಾರರಿಗೆ ಒಳಿತಾಗಬೇಕೆಂಬ ದೃಷ್ಟಿಯಿಂದ ಮಾನ್ಯ ದೇವೇಗೌಡರು ಒಂದು ಕಾನೂನು ತಂದರು. ಅವರು ಎಲ್ಲಾ ಬಡಾವಣೆಗಳಿಗೂ ತೆರಳಿ, ರೆವಿನ್ಯೂ ನಿವೇಶನದಾರರ ಪರವಾಗಿ ನಿಂತುಕೊಂಡು, ಅವರ ಕೇಸ್‌ಗಳು ಕೋರ್ಟು-ಕಟ್ಟಳೆ ಹತ್ತಿ ಪೊಲೀಸ್ ಠಾಣೆಗಳಿಗೆ ಅಲೆಯುತ್ತಿದ್ದುದ್ದನ್ನು ತಪ್ಪಿಸಬೇಕೆಂದು ಅಭಿವೃದ್ಧಿ ಶುಲ್ಕ ಕಟ್ಟುವ ಮೂಲಕ ಅವರಿಗೆ ಖಾತೆ, ಕಂದಾಯ ಮಾಡಿಸಿಕೊಡಬೇಕೆಂದು ಸುತ್ತೋಲೆ ಹೊರಡಿಸಿ, ಸ್ವತಃ ಉದ್ಘಾಟಿಸಿದರು. ಈಗ ಅದನ್ನು ನಿಲ್ಲಿಸಿದ್ದಾರೆ, ಅಲ್ಲಿನ ನಗರಸಭೆಗಳಿಗೆ ಏನು betterment charges ಬರಬೇಕಿತ್ತು. ಅದು ಬರುತ್ತಿಲ್ಲ, ಪ್ಲಾನ್ ಸ್ಯಾಂಕ್ಷನ್ ಆಗಬೇಕು. ಸುಮಾರು ಎರಡು ಲಕ್ಷದಷ್ಟು ಮನೆಗಳಿದ್ದರೂ ಒಂದೂ ಪ್ಲಾನ್ ಸ್ಯಾಂಕ್ಷನ್ ಆಗುತ್ತಿಲ್ಲ. ಜನರು ಬೇರೆ ದಾರಿ ಹುಡುಕಿಕೊಂಡಿದ್ದಾರೆ ನೀವು ಯಾವಾಗ ತುಘಲಕ್ ದರ್ಬಾರ್ ಮಾಡಿದಿರಿ, ಒಂದು ಸಲ ಜನತಾದಳ ಸರ್ಕಾರ ಅಧಿಕಾರಕ್ಕೆ ಬಂದಾಗ ಅಭಿವೃದ್ಧಿ ಶುಲ್ಕ ಕಟ್ಟಿಸಿಕೊಳ್ಳಬೇಕೆಂದು ಆಂದೋಳನ ನಡಿಸಿ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಅಭಿವೃದ್ಧಿ ಶುಲ್ಕಕ್ಕೆ ತಡೆ ಕೊಟ್ಟರು, ಈಗ ಬೀದಿ ಬೀದಿಗಳಲ್ಲಿ ಬೋಗಸ್ ದಾಖಲೆ ! ಕಮೀಷನರ್ ಸಹಿಯನ್ನು ತಾವೇ ಹಾಕುತ್ತಾರೆ ! ಎಇಇ ಸಹಿಯನ್ನು ಅವರೇ ಮಾಡುತ್ತಾರೆ ! ಖಾತೆ ಬೇಕೆ? ಪ್ಲಾನ್ ಬೇಕೆ? ಏನು ಬೇಕು? ಅವೆಲ್ಲದರ ಬಗ್ಗೆ ನನ್ನ ಹತ್ತಿರ ದಾಖಲೆ ಇದೆ, ಇದು ಪೊಲೀಸ್ ಕಂಪ್ಲೆಂಟ್ ಆಗಿ ಮೊನ್ನೆ ಒಬ್ಬರನ್ನು ಅರೆಸ್ಟ್ ಮಾಡಿದರು ಅರೆಸ್ಟ್ ಆಗಿ ಮೂರು ದಿನಗಳ ನಂತರ ಆತ ಬಿಡುಗಡೆಯಾಗಿ ವಾಪಸ್ಸು ಬಂದಿದ್ದಾನೆ. ಸುಮಾರು ಹತ್ತು ಸಾವಿರದಷ್ಟು ದಾಖಲೆ ಎಂದರೆ, ಸರ್ಕಾರಕ್ಕೆ ಎಷ್ಟು ಕೋಟಿ ರೂಪಾಯಿಗಳ ನಷ್ಟವಾಯಿತು? ನೀವು ಏನು ತಡೆಹಿಡಿಯುತ್ತಿದ್ದೀರಿ, ತಡೆಹಿಡಿದ ತಕ್ಷಣ ನೀವು ಏನಾದರೂ ಮಾಡಬೇಕಲ್ಲಾ? ಪರ್ಯಾಯವಾಗಿ ಏನಾದರೂ ಕೊಡಬೇಕಲ್ಲಾ ತಡೆಹಿಡಿಯುವುದನ್ನು ಬಿಟ್ಟು ನಕಾಶೆ ಮಂಜೂರಾತಿಗೆ, ಬೆಟರ್‌ಮೆಂಟ್ ಚಾರ್ಜ್‌ಗೆ

ಏನಾದರೊಂದು ಅವಕಾಶ ಕೊಡಬೇಕು, ಇದರಿಂದಾಗಿ ಅಲ್ಲಿನ ಜನರು ಇವೊತ್ತು ನಿಜಕ್ಕೂ ಪಾಪದ ಕೂಪದಲ್ಲಿದ್ದಾರೆ. ಅಲ್ಲಿ ಯಾವುದೇ ಕೆಲಸಗಳಾಗುತ್ತಿಲ್ಲ ಸ್ವಚ್ಛತೆಯ ಕೆಲಸ ಕೈಗೊಳ್ಳುವುದಕ್ಕಾಗುತ್ತಿಲ್ಲ. ಕಾಮಗಾರಿ ಬೇಡ, ಅದರ ಬಗ್ಗೆ ಕೇಳುತ್ತಿಲ್ಲ, ಅಲ್ಲಿ ಕಸ ಗುಡಿಸಬೇಕು. ನೈರ್ಮಲ್ಯೀಕರಣದ ವ್ಯವಸ್ಥೆಯಾಗಬೇಕು. ಕಳೆದ ಎಂಟು ತಿಂಗಳುಗಳಿಂದ ಸಂಬಳ ಕೊಟ್ಟಿಲ್ಲ. ನೀವು ಇಂತಹ ಕೆಲಸ ಮಾಡಿದ್ದೀರಿ. ನನ್ನ ಬಳಿ ದಾಖಲೆ ಇದೆ. ಕೊಡುತ್ತಿದ್ದೇನೆ. ಬೇಕಾದರೆ ತಾವು ಪರಿಶೀಲಿಸಿ. ಎಲ್ಲವೂ ಬೋಗಸ್ ದಾಖಲೆ. ಪೊಲೀಸ್ ಕಂಪ್ಲೆಂಟ್ ಆಗಿ ಹತ್ತು ಸಾವಿರದಷ್ಟು ದಾಖಲೆ ಕೊಟ್ಟಿದ್ದಾರೆ. ಅವರೇ ಕಮೀಷನರ್‌ನವರ ಸಹಿ ಮಾಡಿದ್ದಾರೆ, ಪ್ಲಾನ್ ಸ್ಯಾಂಕ್ಷನ್ ಆಗಿದೆ, ಅಭಿವೃದ್ಧಿ ಶುಲ್ಕಕ್ಕೂ ಅವರೇ ಸಹಿ ಮಾಡಿದ್ದಾರೆ, ಏಜೆಂಟ್‌ಗಳಿದ್ದಾರೆ, ಅಂದರೆ, ಒಂದೊಂದು ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ನೀವು ಒಂದೊಂದು ಜನವಿರೋಧಿ ಕಾನೂನುಗಳನ್ನು ಮಾಡಿದರೆ ತಪ್ಪಾಗುತ್ತದೆ. ಮಾನ್ಯ ಕಂದಾಯ ಸಚಿವರ ಗಮನಕ್ಕೆ ತರುವುದಾದರೆ, ತಾವು ತಮ್ಮ election manifestದಲ್ಲಿ ಹೇಳಿದ್ದೀರಿ, 'ನಗರದ ಸೌಂದರ್ಯೀಕರಣ ನೆಪದಲ್ಲಿ ಬಡವರ ಮನೆಗಳನ್ನು ನೆಲಸಮ ಮಾಡುವುದನ್ನು ನಾವು ವಿರೋಧಿಸುತ್ತೇವೆ. ಆದುದರಿಂದ, ರೆವಿನ್ಯೂ ನಿವೇಶನಗಳನ್ನು ನಾವು ಹಿಂದೆ ಮಾಡಿದಂತೆ ಈಗಲೂ ಅಕ್ರಮ ನಿವೇಶನ ಮತ್ತು ಅಕ್ರಮ ಕಟ್ಟಡಗಳನ್ನು ಬಡವರ ಹಿತದೃಷ್ಟಿಯಿಂದ ಸಕ್ರಮಗೊಳಿಸಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡುತ್ತೇವೆ' ಎಂದಿದ್ದೀರಿ. ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಜನರ ಕಷ್ಟ ಏನಿದೆ, ರಾಜಕೀಯವಾಗಿ ಆ ಸರ್ಕಾರ, ಈ ಸರ್ಕಾರವೆನ್ನುವುದು ಬೇಡ, ದಯವಿಟ್ಟು ನಿಜವಾಗಿಯೂ ಪರಿಶೀಲಿಸಿ, ಅಲ್ಲಿನ ನಗರಸಭೆಗಳಿಗೆ ಆದಾಯ ಬರುವಂತೆ ಅಭಿವೃದ್ಧಿ ಶುಲ್ಕ, ಪ್ಲಾನ್ ಸ್ಯಾಂಕ್ಷನ್ ಮಾಡುವಂತಹ ಅಧಿಕಾರವನ್ನು ಕೊಟ್ಟರೆ ಅನುಕೂಲವಾಗುತ್ತದೆ. ನಗರಸಭೆಯಲ್ಲಿ ಹಿಂದೆ ನಡೆದಿರುವ ತಪ್ಪುಗಳಿಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಏನು ಶಿಕ್ಷೆ ವಿಧಿಸುತ್ತಾರೋ, ಅದರ ಬಗ್ಗೆ ಲೋಕಾಯುಕ್ತದವರು ಕ್ರಮ ತೆಗೆದುಕೊಳ್ಳಲಿ. ಆ ಕುರಿತು ನನ್ನದು ಎರಡು ಮಾತಿಲ್ಲ. ಆದರೆ, ಅಮಾಯಕ ಜನರಿಗೇಕೆ ಶಿಕ್ಷೆ ಕೊಡುತ್ತಿದ್ದೀರಿ? ದಯವಿಟ್ಟು ಮಾನ್ಯ ಮಂತ್ರಿಗಳು ಇದಕ್ಕೆ ಪರಿಹಾರ ಒದಗಿಸಿಕೊಡಬೇಕೆಂದು ಕೇಳುತ್ತೇನೆ.

† **ಶ್ರೀ ವಿ. ಸೋಮಣ್ಣ(ಬಿನ್ನಿಪೇಟೆ)** : ಸನ್ಮಾನ್ಯ ಅಧ್ಯಕ್ಷರೆ, ಇದು ತುಂಬಾ ಪ್ರಮುಖ ವಿಚಾರವಾಗಿರುವುದರಿಂದ ತಮ್ಮ ಮೂಲಕ ನಾನು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಈ ವಿಚಾರವಾಗಿ ಚರ್ಚಿಸಲು ತಾವು ಅರ್ಧ ಗಂಟೆ ಕಾಲ ನಿಗದಿಗೊಳಿಸಬೇಕು. ಬೆಂಗಳೂರು ನಗರಸಭೆ ವ್ಯಾಪ್ತಿಗೆ 5 ಸಿಎಂಸಿ ಹಾಗೂ ಮುನಿಸಿಪಾಲಿಟಿಗಳು ಒಳಪಡುವುದರಿಂದ ಪ್ರಾಯಶಃ ಒಂದು ವರ್ಷಕ್ಕೂ ಮೇಲ್ಪಟ್ಟು ಜನರ ಬವಣೆ ಎಷ್ಟಾಗಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಲಕ್ಷಾಂತರ ಜನರಿಗೆ ಇದರಿಂದ ತೊಂದರೆಯಾಗಿದೆ. ಈ ಹಿಂದೆ ಸರ್ಕಾರ ಹೊರಡಿಸಿದ ಆದೇಶವೇನಿತ್ತು. ಸರ್ಕಾರಿ ಜಮೀನುಗಳನ್ನು ಹೊರತುಪಡಿಸಿ, ಸಿಎಗೆ ಬಿಟ್ಟಿರುವ ಜಮೀನನ್ನು ಹೊರತುಪಡಿಸಿ ಯಾರು ಈಗಾಗಲೇ ಖಾಸಗಿ(ರೆವಿನ್ಯೂ)

ಬಡಾವಣೆಗಳಲ್ಲಿ ವಾಸಿಸುತ್ತಿದ್ದರೋ, ಅಂತಹವರಿಗೆ ಖಾತೆ ಮಾಡಿಸಿಕೊಡುವುದು ಮತ್ತು ಅವರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವ ವಿಚಾರ ಈಗಾಗಲೇ ಒಂದು ಹಂತಕ್ಕೆ ಬಂದಿತ್ತು ಲೋಕಾಯುಕ್ತದವರು ನಗರಸಭೆಗಳಲ್ಲಿ ದುರುಪಯೋಗವಾಗಿರುವ ಕೆಲವು ಪ್ರಕರಣಗಳಲ್ಲಿ ಅದು ದುರುಪಯೋಗವಾಗಿದೆಯೇ ಇಲ್ಲವೇ ಎಂಬುದರ ಸತ್ಯಾಸತ್ಯತೆ ಕುರಿತು ಕೂಲಂಕಷವಾಗಿ ಚರ್ಚೆಯಾಗಲಿ, ಕ್ರಮ ತೆಗೆದುಕೊಳ್ಳಲಿ, ಅದರ ಬಗ್ಗೆ ನಮ್ಮ ಅಭ್ಯಂತರವೇನೂ ಇಲ್ಲ, ಆದರೆ, ಅಲ್ಲಿ ವಾಸಿಸುತ್ತಿರುವ ಸಾರ್ವಜನಿಕರೇನಿದ್ದಾರೆ. ಅವರುಗಳು ತುಂಬಾ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಒಂದು ಚಿಕ್ಕ ಮನೆ ನಿರ್ಮಿಸಿದರೂ ಅವರು ವಿದ್ಯುತ್ ಸೌಲಭ್ಯ ಪಡೆದುಕೊಳ್ಳುವುದಕ್ಕಾಗುವುದಿಲ್ಲ. ಅದೇ ರೀತಿ ಕುಡಿಯಲು ನೀರು ತೆಗೆದುಕೊಳ್ಳುವುದಕ್ಕಾಗುತ್ತಿಲ್ಲ. ಮತ್ತು ಒಳಚರಂಡಿ ವ್ಯವಸ್ಥೆ ಮಾಡುವುದಕ್ಕಾಗುವುದಿಲ್ಲ. ಹೀಗಾಗಿ ಒಂದು ರೀತಿಯಲ್ಲಿ ವಿಪರ್ಯಾಸದ ವ್ಯವಸ್ಥೆಯಾಗಿದೆ, ಆದುದರಿಂದ, ಈ ವಿಷಯ ಕುರಿತು ಅರ್ಧ ಗಂಟೆ ಕಾಲಾವಕಾಶ ನಿಗದಿಪಡಿಸಿ, ಕೂಲಂಕಷವಾಗಿ ಚರ್ಚಿಸಲು ಅವಕಾಶ ಕಲ್ಪಿಸಿಕೊಡಬೇಕು. ಇದಕ್ಕೊಂದು ಸ್ಪಷ್ಟ ರೂಪ ಕೊಡಲಿಲ್ಲವೆಂದರೆ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತದೆ. ದಯಮಾಡಿ 6ನೇ ತಾರೀಖಿನೊಳಗಾಗಿ ಕರೆದು ಚರ್ಚಿಸಿದ ಬಳಿಕ ಇದಕ್ಕೆ ಸಮಂಜಸವಾದ ಉತ್ತರ ಕೊಡುವ ಮುಖಾಂತರ ಆ ಭಾಗದ ಜನರಿಗೆ ಅನುಕೂಲ ಕಲ್ಪಿಸಿಕೊಡುವುದು ಸೂಕ್ತವೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

† **ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):** ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿಯನ್ನು ಪಡೆದು, ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ.

ಬೆಂಗಳೂರು ಸುತ್ತಮುತ್ತಲಿನ ನಗರಸಭೆಗಳಾದ ದಾಸರಹಳ್ಳಿ, ಯಲಹಂಕ, ಬ್ಯಾಟರಾಯನಪುರ, ಮಹದೇವಪುರ, ಕೆ,ಆರ್, ಪುರಂ, ಪಟ್ಟಣಗೆರೆ, ಬೊಮ್ಮನಹಳ್ಳಿ ಮತ್ತು ಕೆಂಗೇರಿ ಪುರಸಭೆಯ 1999 ರಿಂದ 2001ರಲ್ಲಿ ಸುಮಾರು 239.00 ಕೋಟಿ ರೂ.ಗಳ ಸ್ಟಾಂಪ್ ಶುಲ್ಕವನ್ನು ಹೆಚ್ಚಾಗಿ ಪಡೆದುಕೊಂಡಿರುವುದರಿಂದ 2002 ರ ನಂತರ ಸದರಿ ನಗರಸಭೆಗಳಿಗೆ ಲಭ್ಯವಾಗುವ ಸ್ಟಾಂಪ್ ಶುಲ್ಕವನ್ನು ಈಗಾಗಲೇ ತೆಗೆದುಕೊಂಡಿರುವ ಮೊತ್ತಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುತ್ತಿದೆ.

ಈ ನಗರಸಭೆಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆಯನ್ವಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವೇ ಯೋಜನಾ ಪ್ರಾಧಿಕಾರವಾಗಿದೆ, ಹೀಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮಾತ್ರ ಈ ನಗರಸಭೆಗಳ ವ್ಯಾಪ್ತಿಯ ಪ್ರದೇಶದಲ್ಲಿ ಅಭಿವೃದ್ಧಿ ಶುಲ್ಕವನ್ನು ಸಂಗ್ರಹಿಸಬೇಕಾಗಿದೆ, ಆದುದರಿಂದ ಈ ನಗರ ಸ್ಥಳೀಯ ಸಂಸ್ಥೆಗಳಿಗೆ ಅಭಿವೃದ್ಧಿ ಶುಲ್ಕವನ್ನು ಸಂಗ್ರಹಿಸದಂತೆ ಸರ್ಕಾರ ಸೂಚನೆ ನೀಡಿದೆ.

ಮೇಲೆ ತಿಳಿಸಿದ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ವ್ಯಾಪ್ತಿಯಲ್ಲಿನ ನಿವೇಶನಗಳ ನಕ್ಷೆ ಮಂಜೂರಾತಿಗೆ ಸಂಬಂಧಿಸಿದಂತೆ ಬೆಂಗಳೂರು

ಮಹಾನಗರಪಾಲಿಕೆಯ ಬೈಲಾ ಮತ್ತು ಬೆಂಗಳೂರು ನಗರ ಸಿ.ಡಿ.ಪಿ.ಗೆ ಅನುಗುಣವಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದಿತವಾಗಿರುವ ನಿವೇಶನ/ಲೇಔಟ್‌ಗಳಲ್ಲಿ ನಿಗದಿತ ಶುಲ್ಕವನ್ನು ಸಂಗ್ರಹಿಸಿ ನೆಲಮಹಡಿ+3 ಮಹಡಿವರೆಗಿನ ನಕ್ಷೆಯನ್ನು ಮಂಜೂರು ಮಾಡಲು ದಿನಾಂಕ 29–1–2004ರ ಸೂಚನೆಯಲ್ಲಿ ತಿಳಿಸಲಾಗಿದೆ. ನೆಲಮಹಡಿ ಮತ್ತು 3ಕ್ಕಿಂತ ಹೆಚ್ಚಿನ ಅಂತಸ್ತುಗಳ ಕಟ್ಟಡದ ನಕ್ಷೆಗೆ ಸಂಬಂಧಿಸಿದಂತೆ ಈ ನಗರ ಸ್ಥಳೀಯ ಸಂಸ್ಥೆಗಳು ನಕ್ಷೆಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಪರಿಶೀಲಿಸಿದ ನಂತರವೇ ಮಂಜೂರು ಮಾಡಬೇಕಾಗುತ್ತದೆ. ಕರ್ನಾಟಕ ಟೌನ್ ಮತ್ತು ಕಂಟ್ರಿ ಪ್ಲಾನಿಂಗ್ ಅಧಿನಿಯಮದನ್ವಯ ನಕ್ಷೆ ಮಂಜೂರಾತಿ ನೀಡುವಾಗ ಅಭಿವೃದ್ಧಿ ಶುಲ್ಕ ಸಂಗ್ರಹಿಸಬಹುದಾಗಿದೆ.

ಯೋಜನಾ ಪ್ರಾಧಿಕಾರವಾದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದಿಸಲ್ಪಟ್ಟ ಬಡಾವಣೆಗಳು/ನಿವೇಶನಗಳಿಗೆ ನಗರಸಭೆಯವರು ಕಟ್ಟಡದ ನಕ್ಷೆಗಳನ್ನು ಮಂಜೂರು ಮಾಡಬಹುದಾಗಿದೆ.

ಖಾತೆಗಳನ್ನು ಮಾಡುವಾಗ ಈ ನಗರ ಸ್ಥಳೀಯ ಸಂಸ್ಥೆಗಳು ಅಭಿವೃದ್ಧಿ ಶುಲ್ಕ ವಸೂಲಿ ಮಾಡುತ್ತಿದ್ದು, ಇದು ಕಾನೂನಿಗೆ ವಿರುದ್ಧವಾಗಿರುವ ಕಾರಣ ಈ ರೀತಿ ಶುಲ್ಕ ವಿಧಿಸದಂತೆ ನಗರ ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನ ನೀಡಲಾಗಿತ್ತು.

ಅನಧಿಕೃತ ಆಸ್ತಿಗಳಿಗೆ ನಗರಸಭೆಯವರು ಸದರಿ ಆಸ್ತಿಗಳ ತೆರಿಗೆಯ ಎರಡರಷ್ಟು ದಂಡವನ್ನು ವಿಧಿಸಬಹುದಾಗಿದೆ. ತೆರಿಗೆಗಳನ್ನು ಸಂಗ್ರಹಿಸಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಯಾವುದೇ ತೊಂದರೆ ಇರುವುದಿಲ್ಲ.

ಶ್ರೀ ಆರ್. ಅಶೋಕ್ : ಸನ್ಮಾನ್ಯ ಅಧ್ಯಕ್ಷರೇ, ಉತ್ತರ ಸಮಂಜಸ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಚರ್ಚೆಗೆ ಅವಕಾಶವಿಲ್ಲ, ಉತ್ತರವನ್ನು ಬೇರೆ ರೂಪದಲ್ಲಿ ಸರ್ಕಾರದಿಂದ ಪಡೆದುಕೊಳ್ಳಬಹುದು. ಮಾನ್ಯ ಶಾಸಕರು ನಮ್ಮನ್ನು ತಪ್ಪಾಗಿ ಭಾವಿಸುತ್ತಾರೆ. ಅವರಿಗೆ ಬಹಳ ಜರೂರತ್ತಾಗಿರುವ ಮಾಹಿತಿ ಇರಬಹುದು. ಈ ಉತ್ತರದಿಂದ ಅವರಿಗೆ ತೃಪ್ತಿಯಾಗದಿರಬಹುದು. ಆದರೆ, ಚರ್ಚಿಸಲು ನಿಯಮಾವಳಿಯಲ್ಲಿ ಬೇರೆ ರೂಪದಲ್ಲಿ ತರಲು ಸಾಧ್ಯವಿದೆ. ಶೂನ್ಯ ವೇಳೆಯಲ್ಲಿ ಸರ್ಕಾರ ಉತ್ತರ ಕೊಟ್ಟ ನಂತರ ಚರ್ಚೆಗೆ ಅವಕಾಶವಿಲ್ಲ.

ಶ್ರೀ ಆರ್. ಅಶೋಕ್ : ನಾನು ಕೇಳಿದ್ದೇ, ಒಂದು, ಕೊಟ್ಟಿರುವ ಉತ್ತರವೇ ಇನ್ನೊಂದು, 1996ರಲ್ಲಿ ನೀವೇ ಸುತ್ತೋಲೆ ಹೊರಡಿಸಿದ್ದೀರಿ.

ಅಧ್ಯಕ್ಷರು : ಚರ್ಚಿಸುವುದಕ್ಕೆ ಬೇರೆ ರೀತಿಯಲ್ಲಿ ನೋಟೀಸ್ ಕೊಡಿ, ಅವಕಾಶ ಕಲ್ಪಿಸಿಕೊಡೋಣ. ಈಗ ಮಾನ್ಯ ಸದಸ್ಯರಾದ ಸೋಮಣ್ಣನವರು ಮಾತನಾಡಿ, ಈ ಕುರಿತು ಚರ್ಚಿಸಲು ಅರ್ಧ ಗಂಟೆ ಕಾಲಾವಕಾಶ ಚರ್ಚೆಗೆ ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿರುವುದರಿಂದ ಈಗ ಸಧ್ಯಕ್ಕೆ ತಮ್ಮ ಮಾತನ್ನು ನಿಲ್ಲಿಸಬೇಕು.

ಶ್ರೀ ವಿ. ಸೋಮಣ್ಣ : ಮಾನ್ಯ ಅಧ್ಯಕ್ಷರೆ, ಇವೆಲ್ಲವನ್ನೂ ಕ್ರೋಢಿಕರಿಸಿ ಅರ್ಧ ಗಂಟೆ ಮಾತನಾಡಲು ಅವಕಾಶ ಮಾಡಿಕೊಡಿ. ಇಲ್ಲದಿದ್ದರೆ ಬಾರಿ ತೊಂದರೆಯಾಗುತ್ತದೆ. ಬಾರಿ ಗುರುತರವಾದ ತೊಂದರೆಯನ್ನು ಅನುಭವಿಸುತ್ತಿದ್ದಾರೆ.

ಶ್ರೀ ಆರ್. ಅಶೋಕ್ : ಮಾನ್ಯ ಸೋಮಣ್ಣನವರ ನೇತ್ರತ್ವದಲ್ಲೇ ಮಾನ್ಯ ದೇವೇಗೌಡರು ಆ ರ್ಯಾಲಿಯನ್ನು ಮಾಡಿದ್ದು.

ಶ್ರೀ ವಿ. ಸೋಮಣ್ಣ : ಅರ್ಧ ಗಂಟೆ ಚರ್ಚೆಗೆ ತಾವು ಅವಕಾಶ ಕೊಟ್ಟರೇ ಮಾನ್ಯ ಸಚಿವರೂ ಒಪ್ಪಿಕೊಳ್ಳುತ್ತಾರೆಂದು ಕಾಣುತ್ತದೆ. ಆದ್ದರಿಂದ ತಾವು ದಯಮಾಡಿ 6ನೇ ತಾರೀಖಿನ ಒಳಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಬೇಕು.

ಅಧ್ಯಕ್ಷರು : ಆಯಿತು.

ಶ್ರೀ ಎಂ.ಪಿ. ಪ್ರಕಾಶ್ : ಅವರು ನೋಟೀಸ್ ಕೊಟ್ಟರೆ ಅವಕಾಶ ಮಾಡಿಕೊಡಿ.

ಶ್ರೀ ಡಿ.ಟಿ. ಜಯಕುಮಾರ್ (ನಂಜನಗೂಡು) : ಮಾನ್ಯ ಅಧ್ಯಕ್ಷರೆ, ಇದು ಕೇವಲ ಬೆಂಗಳೂರು ನಗರಕ್ಕೆ ಸೀಮಿತವಾಗಿಲ್ಲ, ಇಡೀ ಕರ್ನಾಟಕದಲ್ಲಿ ಎಲ್ಲಾ ಪುರಸಭೆ ಮತ್ತು ನಗರಸಭೆಯ ವ್ಯಾಪ್ತಿಯಲ್ಲಿ ಇದೇ ರೀತಿಯ ಅಕ್ರಮ ಸಕ್ರಮ ಸೈಟುಗಳ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಬೇಕಾಗಿ ವಿನಂತಿ. ಇದು ಕೇವಲ ಬೆಂಗಳೂರಿಗೆ ಸೀಮಿತವಾಗಿಲ್ಲ. ಇಡೀ ಕರ್ನಾಟಕಕ್ಕೆ ಸೀಮಿತವಾಗಿದೆ. ಎಲ್ಲಾ ನಗರಸಭೆಗಳಲ್ಲಿ ಪಟ್ಟಣಗಳಲ್ಲಿ ಈ ರೀತಿ ತ್ರಿಶಂಕು ರೀತಿಯಲ್ಲಿ ಜನರು ಶಾಪಗ್ರಸ್ಥರಾಗಿ ಜೀವನ ನಡೆಸುತ್ತಿದ್ದಾರೆ. ಆದ್ದರಿಂದ ದಯಮಾಡಿ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

(iv) ರಾಜ್ಯದ ಪರಿಸರ ಬೆಳೆಸಲು ಹಿನ್ನೆಡೆಯುಂಟಾಗಿರುವ ಬಗ್ಗೆ

ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ಅಧ್ಯಕ್ಷರೆ, ವನಸಂವರ್ಧನ ಟ್ರಸ್ಟ್ ಎಂದು ಕಳೆದ ಸರ್ಕಾರ ಒಡಂಬಡಿಕೆಯನ್ನು ಮಾಡಿಕೊಂಡಿತ್ತು. ಈಗ ಮಳೆ ಎಲ್ಲಾ ಕಡೆ ಪ್ರಾರಂಭವಾಗಿದೆ, ಅರಣ್ಯ ಇಲಾಖೆಯವರು ಎಲ್ಲಾ ಕಡೆ ಗಿಡಗಳನ್ನು ನೆಡಬೇಕಾಗಿತ್ತು. ಎಲ್ಲಾ ಕಡೆ ಸಸಿಯನ್ನು ನೆಟ್ಟು ಸಸ್ಯಸಂರಕ್ಷಣೆ ಮಾಡುವ ಕೆಲಸವನ್ನು ಮಾಡಬೇಕಾಗಿತ್ತು. ವಿಚಿತ್ರವೆಂದರೆ, ಒಂದು ಸರ್ಕಾರ ಬದಲಾದ ತಕ್ಷಣವೇ ಏನಾಯಿತು ಎಂಬುದನ್ನು ಹೇಳುತ್ತೇನೆ. ಕಳೆದ ಬಾರಿ ಏನು ವನಸಂವರ್ಧನ ಟ್ರಸ್ಟ್ ಎಂದು ಮಾಡಿ ಅದರ ಮೂಲಕ ರೈತರಿಗೆ ಬೇರೆ ಬೇರೆ ಸಂಘ ಸಂಸ್ಥೆಗಳಿಗೆ ಟ್ರಸ್ಟ್‌ಗಳಿಗೆ ಉಚಿತವಾಗಿ ಸಸಿಗಳನ್ನು ಕೊಡುವ ಬಗ್ಗೆ ಸರ್ಕಾರ ಒಡಂಬಡಿಕೆಯನ್ನು ಮಾಡಿಕೊಂಡಿತ್ತು. ಕರ್ನಾಟಕ ರಾಜ್ಯದ ಜನತೆಯಲ್ಲಿ ಪರಿಸರ ಪ್ರಜ್ಞೆಯನ್ನು ಜಾಗ್ರತೆಯನ್ನು ಮೂಡಿಸಿ ಮರಗಳನ್ನು ಬೆಳೆಸಿ ಜೈವಿಕ ಸಂಪನ್ಮೂಲಗಳನ್ನು ಉತ್ತಮಪಡಿಸಿ ಪರಿಸರವನ್ನು ಅಭಿವೃದ್ಧಿಪಡಿಸುವುದು ಕರ್ನಾಟಕ ವನಸಂವರ್ಧನ ಟ್ರಸ್ಟ್ (ರಿ) ಇದರ ಆದ್ಯ ಕರ್ತವ್ಯವಾಗಿದೆ. ಇದರ ಪ್ರಸ್ತಾವವನ್ನು ಕರ್ನಾಟಕ ಸರ್ಕಾರವು ಕೆಳಕಂಡ ಸಾಕ್ಷಿಗಳ ಸಮುಖದಲ್ಲಿ ಒಪ್ಪಿರುತ್ತದೆ. ಅಂದರೆ ಕಾರ್ಯದರ್ಶಿ, ಸರ್ಕಾರಿ ಅಧಿಕಾರಿಗಳು, ವಿಶ್ವನಾಥ್, ಅಪರ ಮುಖ್ಯಕಾರ್ಯದರ್ಶಿಯವರು ಸಹಿಯನ್ನು ಹಾಕಿ ಒಡಂಬಡಿಕೆಯನ್ನು ಮಾಡಿಕೊಂಡರು. ಐದು ಕೋಟಿ ಸಸಿಗಳನ್ನು ಈ ರಾಜ್ಯದಲ್ಲಿ ನೆಡಬೇಕು. ಆದಿಚುಂಚನಗಿರಿಯ ಮಠಾಧೀಶರಾದಂಥ ಮಾನ್ಯ ಬಾಲಗಂಗಾಧರ ಸ್ವಾಮಿಜಿಯವರು ಇದರ ಕಾರ್ಯದರ್ಶಿಯಾಗಿದ್ದರೆ, ಮಾನ್ಯ